

**ಸೋಮವಾರಪೇಟೆಗೆ ಸಮೀಪದಲ್ಲಿರುವ ಮಲ್ಲಳ್ಳಿ ಜಲಪಾತ ಕುಮಾರಧಾರಾ ನದಿ ಸೃಜಿಸಿರುವ ಸುಂದರ ನೀರಕಾವ್ಯ. ಈ ಜಲಪಾತವನ್ನು ನೋಡಲು ಸವೆಸಬೇಕಾದ ದಾರಿ ಚಾರಣದ ಸೊಗಸಾದ ಅನುಭವವನ್ನೂ ನೀಡಬಲ್ಲದು.**



ಹೊರಡಬೇಕಿದ್ದುದು ಇಲ್ಲಿ! ಮತ್ತೊಮ್ಮೆ ಎಲ್ಲರೂ 'ಹಾ... ಹೋ...' ಮಾಡಿದೆವು. ನಿಜಕ್ಕೂ ಅದು ಸ್ವರ್ಗಸದೃಶ ಪರಿಸರ.

## ನೋಟದ ಸುಖ

ವಾತಾವರಣ ಹಿತವಾಗಿತ್ತು. ಮಳೆಗಾಲವಾಗಿದ್ದರೂ ಅಂದು ಬಿಸಿಲು ಚೆನ್ನಾಗಿತ್ತು. ನಮ್ಮ ಕ್ಯಾಮೆರಾಗಳಿಗೆ ಕಣ್ತುಂಬ ನೋಟ, ನಮಗೆ ಕೈತುಂಬ ಕೆಲಸ. ಗಾಳಿ ಬೀಸಿದಂತೆಲ್ಲ ನೀರ ಹನಿಗಳ ಸಿಂಚನ. ಕ್ಯಾಮೆರಾವನ್ನು ಕಾಪಾಡಿಕೊಳ್ಳುವುದೇ ಒಂದು ಸಮಸ್ಯೆಯಾಯಿತು. ಒಂದು ಕೈಯಲ್ಲಿ ಛತ್ರಿ ಹಿಡಿದು, ಮತ್ತೊಂದು ಕೈಯಲ್ಲಿ ಕ್ಯಾಮೆರಾ ಹಿಡಿದು ಸರ್ಕಸ್ ಮಾಡುತ್ತಾ ಮನದಣಿಯೆ ಛಾಯಾಚಿತ್ರಗಳನ್ನು ತೆಗೆದೆ.

ಎಷ್ಟು ಹೊತ್ತಾದರೂ ಸರಿಯೇ ಇಲ್ಲಿಯೇ ಇರಬೇಕು ಎನ್ನುವ ಬಯಕೆ. ಆದರೆ ಸಮಯವನ್ನು ಹಿಡಿದು ನಿಲ್ಲಿಸುವುದು ಹೇಗೆ? ಒಲ್ಲದ ಮನಸ್ಸಿನಿಂದ ಮೇಲೇರಲು ಪ್ರಾರಂಭಿಸಿದೆವು. ಕೆಳಗಿಳಿಯುವಾಗ ಇದ್ದ ಉತ್ಸಾಹ ಈಗಿಲ್ಲದುದರಿಂದ ಹತ್ತುವಾಗ ಆಯಾಸ ಕಾಣಿಸಿತು. ಅಂತೂ ಇಂತೂ ಮೇಲೇರಿ ಕಾರಿನ ಬಳಿ ಬಂದೆವು. ಕೆಲವು ಗೆಳೆಯರಿಗೆ ಜಿಗಣೆ ಕಚ್ಚಿ ಕಾಲುಗಳಲ್ಲಿ ರಕ್ತ ಒಸರುತ್ತಿತ್ತು!

ಮನೆಗೆ ಬಂದು ಶೂ ಬಿಚ್ಚಿ ಕಾಲುಚೀಲ ತೆಗೆದರೆ ಕಿರುಬೆರಳು ಹಾಗೂ ಅದರ ಪಕ್ಕದ ಬೆರಳಿನ ನಡುವೆ ರಕ್ತ ಇಳಿಯುತ್ತಿತ್ತು. ಜಿಗಣೆ ಯಾವಾಗ ಕಚ್ಚಿತ್ತೋ ತಿಳಿಯದು.

## ಕುಮಾರಾಧಾರ ಹರಸಿದ ಧಾರೆ

ಪಶ್ಚಿಮ ಘಟ್ಟದ ಪುಷ್ಪಗಿರಿಯಲ್ಲಿ ಹುಟ್ಟುವ ಕುಮಾರಧಾರಾ ನದಿ ಸೋಮವಾರಪೇಟೆಯಿಂದ ಸುಮಾರು 28 ಕಿ.ಮೀ. ದೂರದಲ್ಲಿ 'ಮಲ್ಲಳ್ಳಿ' ಜಲಪಾತವಾಗಿ ಸುಮಾರು ನೂರು ಅಡಿ ಎತ್ತರದಿಂದ ಧುಮುಕುತ್ತದೆ. ನಂತರ ಮುಂದೆ ಹರಿದು ಸುಬ್ರಹ್ಮಣ್ಯ ಕ್ಷೇತ್ರವನ್ನು ಹಾದು ನೇತ್ರಾವತಿ ನದಿಯನ್ನು ಸೇರುತ್ತದೆ.

ಮಳೆಗಾಲದ ಮೂರ್ನಾಲ್ಕು ತಿಂಗಳು ನದಿ ಮೈದುಂಬಿ ಹರಿದು, ಈ ಜಲಪಾತ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತದೆ. ಸಾಕಷ್ಟು ನಡಿಗೆ ಇಳಿಯುವಿಕೆ ಇರುವುದರಿಂದ, ದೈಹಿಕವಾಗಿ ಗಟ್ಟಿಗರಿಗೆ ಮತ್ತು ಚಾರಣ ಅಭ್ಯಾಸವಿದ್ದವರಿಗೆ ಈ ನಡಿಗೆಯ ಹಾದಿ ಸಂಪೂರ್ಣ ಖುಷಿ ನೀಡಬಹುದು. ಉಳಿದವರು ಮೇಲಿನಿಂದಲೇ ಅಥವಾ ಕೆಲವು ಮೆಟ್ಟಿಲು ಇಳಿದು ಜಲಪಾತದ ದೃಶ್ಯ ಸವಿಯಬಹುದು. ತಿಂಡಿ ತೀರ್ಥ ಜೊತೆಗೊಯ್ಯುವುದು ಅವಶ್ಯ. ರಜಾದಿನಗಳಲ್ಲಿ ಹೆಚ್ಚಿನ ಪ್ರವಾಸಿಗರು ಆಗಮಿಸುತ್ತಾರೆ. ಒಂದು ಗುಂಪಾಗಿಯೇ ಜಲಧಾರೆ ನೋಡಲು ಹೋಗುವುದು ನೋಟದ ಸಂತಸವನ್ನೂ ಹೆಚ್ಚಿಸುತ್ತದೆ, ಸುರಕ್ಷತೆಯ ದೃಷ್ಟಿಯಿಂದಲೂ ಒಳ್ಳೆಯದು.

ಬೆಂಗಳೂರಿನಿಂದ ಹಾಸನ ಅಥವಾ ಮೈಸೂರು–ಕುಶಾಲನಗರ ಮಾರ್ಗವಾಗಿ ಸೋಮವಾರಪೇಟೆ ತಲುಪಬಹುದು. ಇದು ಸುಮಾರು 250 ಕಿ.ಮೀ. ದೂರದ ಹಾದಿ.